# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು - 572 103

ದೂರವಾಣಿ : 0816-2254546 0816-2255596, 0816-2255597 ಫ್ಯಾಕ್ಸ್ : 0816-2270719

ಸಂಖ್ಯೆ: ತುವಿ : ಶೈವಿ: 2017-18 : 2411 ದಿನಾಂಕ: 25.09.2017

## ಸುತ್ತೋಲೆ

ವಿಷಯ: ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ ತುಮಕೂರು ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ವಿವಿಧ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ:
1) ಸಹಾಯಕ ನಿರ್ದೇಶಕರು (ಗ್ರೇಡ್-I) ಸಮಾಜ ಕಲ್ಯಾಣ ಇಲಾಖೆ, ತುಮಕೂರು ತಾಲ್ಲೂಕು ಇವರ ಪತ್ರ ಸಂಖ್ಯೆ:ತಾ.ಸ.ಕ.ಅ.ತು/ಮೇನಂವಿವೇ.ಸಿಆರ್ **02/2017-18** ದಿನಾಂಕ:18.07.2017
2) ಸಹಾಯಕ ನಿರ್ದೇಶಕರು (ಗ್ರೇಡ್-I) ಸಮಾಜ ಕಲ್ಯಾಣ ಇಲಾಖೆ, ತುಮಕೂರು ತಾಲ್ಲೂಕು ಇವರ ಪತ್ರ ಸಂಖ್ಯೆ:ಸ.ನಿ.ಕ.ತು.ಎಸ್.ಎಸ್.ಪಿ.ಸಿಆರ್ **02/2017-18** ದಿನಾಂಕ:31.08.2017
3) ಮಾನ್ಯ ಕುಲಸಚಿವರ ಅನುಮೋದನೆ (ಕಂಡಿಕೆ-04) ದಿನಾಂಕ 23.09.2017

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ಪತ್ರದಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಅರ್ಜಿ ಸಲ್ಲಿಸುವಿಕೆ ಮತ್ತು ಮಂಜೂರಾತಿ ಕಾರ್ಯಕ್ರಮವನ್ನು ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ www.sw.kar.nic.in ರಡಿ ಬರುವ SC:Post-Metric Scholarship-2017 ರಲ್ಲಿ 2017-18ನೇ ಸಾಲಿಗೆ ಆನ್‌ಲೈನ್ ಮೂಲಕ ಪರಿಶಿಷ್ಟ ಜಾತಿಯ ನವೀನ ಮತ್ತು ನವೀಕರಣ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಉಲ್ಲೇಖ (2)ರ ಪತ್ರದಲ್ಲಿ ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಅರ್ಜಿಸಲ್ಲಿಸುವಿಕೆ ಮತ್ತು ಮಂಜೂರಾತಿ ಕಾರ್ಯಕ್ರಮವನ್ನು ಭಾರತ ಸರ್ಕಾರದ ವೆಬ್‌ಸೈಟ್ https://scholarship.gov.in ರಡಿ 2015-16ರಿಂದ ನೀಡಲಾಗಿತ್ತು. ಅದರಂತೆ, 2017-18ನೇ ಸಾಲಿಗೆ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರದ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವಿಕೆ NSP2.0 ವೆಬ್‌ಸೈಟ್ ಅನ್ನು ಹೊಸ ಆವೃತ್ತಿಯಲ್ಲಿ ಭಾರತ ಸರ್ಕಾರವು ಪ್ರಾರಂಭಿಸಿರುವ ಕಾರಣ 2016-17ನೇ ಸಾಲಿಗೆ ಅರ್ಜಿ ಸಲ್ಲಿಸಿರುವ ನವೀಕರಣ ವಿದ್ಯಾರ್ಥಿಗಳು "Apply for Renewal" ಎಂದು 2017-18ನೇ ಸಾಲಿಗೆ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು "New user/Register" ಅರ್ಜಿ ಸಲ್ಲಿಸಲು ಸೂಚಿಸಿರುತ್ತಾರೆ.

ಆದ್ದರಿಂದ, ಮೇಲ್ಕಂಡ ಉಲ್ಲೇಖ (1) ಮತ್ತು (2)ರ ಪತ್ರಗಳ ಪ್ರತಿಗಳನ್ನು ಈ ವಿಶ್ವವಿದ್ಯಾನಿಲಯದ ಅಂತರ್ಜಾಲ www.tumkuruniversity.ac.in ನಲ್ಲಿ ಪ್ರಕಟಿಸಲಾಗಿದೆ. ಸದರಿ ಪತ್ರದ ಪ್ರತಿಗಳನ್ನು ಅಂತರ್ಜಾಲದಿಂದ ಪಡೆದು ತಮ್ಮ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳು ನಿಗಧಿತ ಸಮಯದಲ್ಲಿ (ದಿನಾಂಕ 30.10.2017 ಮತ್ತು 31.10.2017ರ ಒಳಗಾಗಿ) ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು ಕೋರಿದೆ. ಹೆಚ್ಚಿನ ಮಾಹಿತಿಯ ಅವಶ್ಯಕವಿದ್ದಲ್ಲಿ ಸಹಾಯಕ ನಿರ್ದೇಶಕರ ಕಛೇರಿ, ತುಮಕೂರು ತಾಲ್ಲೂಕು, ಜಿಲ್ಲಾ ಪಂಚಾಯತ್ ಹತ್ತಿರ ತುಮಕೂರು ಇವರನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ತಮ್ಮ ವಿಶ್ವಾಸಿ,

ಉಪಕುಲಸಚಿವರು (ಶೈಕ್ಷಣಿಕ ವಿಭಾಗ)

ಗೆ,

1) ಎಲ್ಲಾ ಸ್ನಾತಕೋತ್ತರ ವಿಭಾಗಗಳ ಸಂಯೋಜಕರು/ಮುಖ್ಯಸ್ಥರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2) ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಘಟಕ ಹಾಗೂ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

ಪ್ರತಿಗಳು,

1) ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಯವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2) ಸಿಸ್ಟಂ ಅನಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಅಗತ್ಯ ಕ್ರಮಕ್ಕಾಗಿ
3) ಕಛೇರಿ ಪ್ರತಿ

e:\vd\kannada letters 2015.docx